# ಕರ್ನಾಟಕ ಸರ್ಕಾರ

**ಸಂಖ್ಯೆ:** ಪಪೂಶಿ/ಸಿಬ್ಬಂದಿ-1/ಎ(5)/ಸಭೆ/01/2013-14

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, ಮಲ್ಲೇಶ್ವರ 18ನೇ ಅಡ್ಡರಸ್ತೆ,
ಬೆಂಗಳೂರು-12. **ದಿನಾಂಕ:** 12-09-2014

## ಸಭೆಯ ಸೂಚನಾ ಪತ್ರ

**ವಿಷಯ:** ದಿನಾಂಕ: 20-09-2014 ರಂದು ಮಾನ್ಯ ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಉಪ ನಿರ್ದೇಶಕರವರುಗಳ ಸಭೆ ಕರೆದಿರುವ ಕುರಿತು.

******

ದಿನಾಂಕ: 20-09-2014 ರಂದು ಬೆಳಗ್ಗೆ 10:30ಕ್ಕೆ ಮಾನ್ಯ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ಕೇಂದ್ರ ಕಛೇರಿಯ ಸಭಾ ಕೊಠಡಿಯಲ್ಲಿ ಮಾಸಿಕ ಸಭೆಯನ್ನು ಕರೆಯಲಾಗಿದೆ. ಸದರಿ ಸಭೆಗೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರು ಹಾಜರಾಗತಕ್ಕದ್ದು ಈ ಸಭೆಯಲ್ಲಿ ಚರ್ಚಿಸಲಾಗುವ ಕಾರ್ಯಸೂಚಿ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ.

ಕಾರ್ಯಸೂಚಿಗೆ ಸಂಬಂಧಪಟ್ಟಂತೆ ಮಾಹಿತಿಯನ್ನು ಪ್ರತ್ಯೇಕವಾಗಿ ಕಳುಹಿಸಿಕೊಡಲು ತಿಳಿಸಿದೆ. ಆಡಳಿತ ವಿಭಾಗದ (ಸಿಬ್ಬಂದಿ ಶಾಖೆ 1, 2) ಹಾಗೂ ಪರೀಕ್ಷಾ ಶಾಖೆಯ ಮಾಹಿತಿಯನ್ನು ಶ್ರೀ ಆರ್ ಹೆಚ್ ರಿತ್ತಿ, ಜಂಟಿ ನಿರ್ದೇಶಕರು (ಆಡಳಿತ/ಪರೀಕ್ಷೆ), ಶೈಕ್ಷಣಿಕ ಹಾಗೂ ಮೂಲಭೂತ ಸವಲತ್ತು ವಿಭಾಗದ ಮಾಹಿತಿಯನ್ನು ಶ್ರೀ ವಿ ಕೆ ನಾಗರಾಜು, ಜಂಟಿ ನಿರ್ದೇಶಕರು (ಶೈಕ್ಷಣಿಕ ಮತ್ತು ಮೂಲಭೂತ ಸವಲತ್ತು), ಮಾನ್ಯತೆ ಮತ್ತು ಅನುದಾನ ವಿಭಾಗದ ಮಾಹಿತಿಯನ್ನು ಶ್ರೀ ಹೆಚ್ ಕೃಷ್ಣಯ್ಯ, ಜಂಟಿ ನಿರ್ದೇಶಕರು(ಮಾನ್ಯತೆ ಮತ್ತು ಅನುದಾನ), ಲೆಕ್ಕಪತ್ರ ಶಾಖೆಯ ವಿಭಾಗದ ಮಾಹಿತಿಯನ್ನು ಶ್ರೀಮತಿ ಜ್ಯೋತಿ ಡಿ ಕುಂದರ್, ಲೆಕ್ಕಾಧಿಕಾರಿ ಹಾಗೂ Eco-club ಸಂಬಂಧಿಸಿದಂತೆ ಶ್ರೀ ಎಸ್ ಜಂಬಣ್ಣ, ಸಹಾಯಕ ನಿರ್ದೇಶಕರು ಇವರುಗಳಿಗೆ ಪ್ರತ್ಯೇಕ ಲಕೋಟೆಗಳಲ್ಲಿ ಸಿದ್ಧಪಡಿಸಿ ದಿನಾಂಕ: 20-9-2014 ರಂದು ತಪ್ಪದೇ ಸಲ್ಲಿಸುವಂತೆ ಸೂಚಿಸಿದೆ.

**ವಿಷಯ ಸೂಚನೆ :-** ಉಪ ನಿರ್ದೇಶಕರೆ ಸ್ವತಃ ಕಡ್ಡಾಯವಾಗಿ ಸಭೆಗೆ ಹಾಜರಾಗತಕ್ಕದ್ದು.

Kind attention to all DD's :-
ವಿವಿಧ ಶಾಖೆಗಳಿಂದ ಕೋರಿದ ಮಾಹಿತಿಯನ್ನು ಆಯಾ
ಶಾಖೆಯ ಅಧಿಕಾರಿ/ಸಿಬ್ಬಂದಿಯ Email ID ಗೆ
ತಕ್ಷಣ mail ಮಾಡುವುದು ಮತ್ತು ಸಭೆಯ
ದಿನದಂದು ಸದರಿ ಮಾಹಿತಿಯ hard copy ಯನ್ನು
ತಪ್ಪದೇ ಸಲ್ಲಿಸುವುದು.

**ನಿರ್ದೇಶಕರು,**
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಪ್ರತಿಗಳು:**

1. ನಿರ್ದೇಶಕರ ಆಪ್ತ ಶಾಖೆಗೆ.
2. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಉಪ ನಿರ್ದೇಶಕರವರಿಗೆ.
3. ಲೆಕ್ಕಾಧಿಕಾರಿಗಳು, ಲೆಕ್ಕಪತ್ರ ಶಾಖೆ, ಕೇಂದ್ರ ಕಛೇರಿ, ಬೆಂಗಳೂರು.
4. ಜಂಟಿ ನಿರ್ದೇಶಕರು(ಆಡಳಿತ)(ಪರೀಕ್ಷೆ) (ಶೈಕ್ಷಣಿಕ)( ಮೂಲಭೂತ ಸವಲತ್ತು) ಅವರ ಆಪ್ತ ಸಹಾಯಕರು.
5. ಎಲ್ಲಾ ಸಹಾಯಕ ನಿರ್ದೇಶಕರು /ಶಾಖಾಧಿಕಾರಿಗಳು/ವ್ಯವಸ್ಥಾಪರಕು/ಅಧೀಕ್ಷಕರು.
6. ಎಲ್ಲಾ ಸಿಬ್ಬಂದಿವರ್ಗದವರಿಗೆ 7. ಕಛೇರಿ ಪ್ರತಿ.

Meeting Agenda

## ಸಿಬ್ಬಂದಿ ಶಾಖೆ 1

1. ಸರ್ಕಾರದ ಅಧಿಸೂಚನೆ ಸಂಖ್ಯೆ ದಿನಾಂಕ:01.08.2014 ರ ಪ್ರಕಾರ ವರ್ಗಾವಣೆಗೊಂಡು ಕರ್ತವ್ಯಕ್ಕೆ ಹಾಜರಾದ/ಹಾಜರಾಗದ ಪ್ರಾಂಶುಪಾಲರ ಮಾಹಿತಿ.

| ಕ್ರಸಂ | ನೌಕರರ ಹೆಸರು ಮತ್ತು ಕಾಲೇಜಿನ ವಿಳಾಸ (ಕಾಲೇಜಿನ ಸಂಕೇತ ಸಂಖ್ಯೆ) | ವರ್ಗಾವಣೆಗೊಂಡ ಕಾಲೇಜಿನ ವಿಳಾಸ (ಕಾಲೇಜಿನ ಸಂಕೇತ ಸಂಖ್ಯೆ) | ಮೂಲ ಕಾಲೇಜಿನಲ್ಲಿ ಕರ್ತವ್ಯದಿಂದ ಬಿಡುಗಡೆಗೊಂಡ ದಿನಾಂಕ | ವರ್ಗಾವಣೆಗೊಂಡ ಕಾಲೇಜಿನಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕ | ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ಕಾರಣ | ಷರಾ |
|---|---|---|---|---|---|---|
| | | | | | | |

2. ದಿನಾಂಕ:31.08.2014 ರ ಅಂತ್ಯಕ್ಕೆ ಖಾಲಿ ಇರುವ ಪ್ರಾಂಶುಪಾಲರ ಹುದ್ದೆಯ ವಿವರ

| ಕ್ರಸಂ | ಪ್ರಾಂಶುಪಾಲರ ಹುದ್ದೆ ಖಾಲಿ ಇರುವ ಕಾಲೇಜಿನ ಹೆಸರು | ಕಾಲೇಜಿನ ಸಂಕೇತ ಸಂಖ್ಯೆ | ಯಾವ ದಿನಾಂಕದಿಂದ ಖಾಲಿ ಇದೆ | ಹುದ್ದೆ ಖಾಲಿಯಾಗಲು ಕಾರಣ | ಷರಾ |
|---|---|---|---|---|---|
| | | | | | |

3. 2015-16 ನೇ ಸಾಲಿನಲ್ಲಿ ವಯೋ ನಿವೃತ್ತಿಹೊಂದುವ ಉಪ ನಿರ್ದೇಶಕರ ಮತ್ತು ಪ್ರಾಂಶುಪಾಲರ ವಿವರ.

| ಕ್ರ.ಸಂ. | ನೌಕರರ ಹೆಸರು ಮತ್ತು ಕಾಲೇಜಿನ ವಿಳಾಸ (ಕಾಲೇಜಿನ ಸಂಕೇತ ಸಂಖ್ಯೆ) | ಜನ್ಮ ದಿನಾಂಕ | ನಿವೃತ್ತಿ ಹೊಂದುವ ದಿನಾಂಕ: | ಷರಾ |
|---|---|---|---|---|
| | | | | |

**ಸೂಚನೆ:** ಸಿಬ್ಬಂದಿ ಶಾಖೆ 1 ರ ಮಾಹಿತಿಯ ಸಾಫ್ಟ್ ಕಾಪಿಯನ್ನು yogananda.mdy@gmail.com ಗೆ ಮೇಲ್ ಮಾಡಲು ತಿಳಿಸಿದೆ.

# ಸಿಬ್ಬಂದಿ-2

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು, ಇಲ್ಲಿ ನಡೆಯಲಿರುವ ಜಿಲ್ಲಾ ಉಪನಿರ್ದೇಶಕರ ಸಭೆಯಲ್ಲಿ ಅತ್ಯಂತ ಜರೂರಾಗಿ ಸಲ್ಲಿಸಬೇಕಾಗಿರುವ ಮಾಹಿತಿ ವಿವರ**

- ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಸೇವೆ ಸಲ್ಲಿಸುತ್ತಿರುವ 2009ನೇ ಸಾಲಿನ ಕ.ಲೋ.ಸೇ. ಆಯೋಗದಿಂದ ನೇಮಕ ಹೊಂದಿ ಬಿ.ಇಡಿ ವ್ಯಾಸಂಗಕ್ಕೆ ಹೋದ ಉಪನ್ಯಾಸಕರುಗಳ ವಿವರ:

| ಕ್ರ.ಸ | ಉ.ಹೆಸರು | ಬೋ.ವಿಷಯ | ಕಾಲೇಜಿನ ವಿಳಾಸ | ಬಿ.ಇಡಿ ವ್ಯಾಸಂಗ ಮಾಡುತ್ತಿರುವ ಕಾಲೇಜು ವಿಳಾಸ |
|---|---|---|---|---|

- ಬಿ.ಇಡಿ ವ್ಯಾಸಂಗ ಮಾಡುತ್ತಿರುವ ಉಪನ್ಯಾಸಕರ ದೃಢೀಕೃತ ಹಾಜರಾತಿ ವಹಿ ಪ್ರತಿಗಳು.
- ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿದ ವಿವರ ಹಾಗೂ ತಗಲುವ ಅಂದಾಜು ವೆಚ್ಚದ ವಿವರ

| ಕ್ರ.ಸ | ಕಾಲೇಜು ವಿವರ | ವಿಷಯ | ಮೊತ್ತ |
|---|---|---|---|

- ಕಳೆದ 3-4 ಶೈಕ್ಷಣಿಕ ಸಾಲಿನಿಂದ ಕಡಿಮೆ ವಿದ್ಯಾರ್ಥಿಗಳ ದಾಖಲಾಗಿರುವ ಕಾಲೇಜು ವಿವರ (ಜಿಲ್ಲಾ ಉಪನಿರ್ದೇಶಕರ ಸ್ಪಷ್ಟ ಅಭಿಪ್ರಾಯ - ಸ್ಥಳಾಂತರಿಸುವುದಕ್ಕೆ ಸಂಬಂಧಿಸಿದಂತೆ)
- ಕಳೆದ 3-4 ಶೈಕ್ಷಣಿಕ ಸಾಲಿನಿಂದ ಹೆಚ್ಚು ವಿದ್ಯಾರ್ಥಿಗಳ ದಾಖಲಾಗಿರುವ ಕಾಲೇಜು ವಿವರ (ಸದರಿ ಕಾಲೇಜಿಗೆ ತೆಗೆದುಕೊಂಡ ಕ್ರಮ)
- ಕಡಿಮೆ ಕಾರ್ಯಭಾರವಿರುವ ಅಥವಾ ವಿದ್ಯಾರ್ಥಿಗಳೇ ಇಲ್ಲದ ಸಂಯೋಜನೆಗಳಿರುವ ಕಾಲೇಜುಗಳ ವಿವರ (ಸದರಿ ಸಂಯೋಜನೆ ಬೇಕೆ/ಬೇಡವೇ ಎಂಬುದರ ಬಗ್ಗೆ ಪ್ರಾಚಾರ್ಯರ/ಉಪನಿರ್ದೇಶಕರ ಸ್ಪಷ್ಟ ಅಭಿಪ್ರಾಯ )
- ದಿನಾಂಕ:31-05-2014ಕ್ಕೆ ಅಂತ್ಯಗೊಳ್ಳುವಂತೆ ಉಪನ್ಯಾಸಕರುಗಳಿಂದ ತೆರವಾದ ಹುದ್ದೆಗಳ ವಿವರ

| ಕ್ರ.ಸ | ಉ.ಹೆಸರು & ಕಾಲೇಜು | ವಿಷಯ | ಹುದ್ದೆ ತೆರವಾದ ದಿನಾಂಕ | ನಿಧನ (ದಿನಾಂಕ) | ನಿವೃತ್ತಿ | ರಾಜೀನಾಮೆ | ಸ್ವ.ಇ.ನಿ | ಇಲಾಖೆ ಬಿಟ್ಟವರು | ವಜಾ | ಪ್ರಾಚಾರ್ಯರ ಹುದ್ದೆಗೆ ಬಡ್ತಿ | ಪ್ರಾಚಾರ್ಯರ ಬಡ್ತಿಯನ್ನು ಮುಂದೂಡಿಕೆ |
|---|---|---|---|---|---|---|---|---|---|---|---|

- 371 ಜೆ ವಿಧಿಯಂತೆ ಸಲ್ಲಿಸಬೇಕಾದ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಕೂಡಲೇ ಸಲ್ಲಿಸುವುದು.
- 2014-15ನೇ ಸಾಲಿನ ವರ್ಗಾವಣೆಯಲ್ಲಿ ಕಾಲೇಜುವಾರು ಉಪನ್ಯಾಸಕರು ಬಿಡುಗಡೆಗೊಂಡ ಹಾಗೂ ವರದಿ ಮಾಡಿಕೊಂಡ ವಿವರವನ್ನು ಪ್ರತ್ಯೇಕ ಪಟ್ಟಿಯಲ್ಲಿ ಸಲ್ಲಿಸುವುದು. ಬಿಡುಗಡೆಗೊಳ್ಳದ ಹಾಗೂ ವರದಿ ಮಾಡಿಕೊಳ್ಳದ ಉಪನ್ಯಾಸಕರುಗಳ ಮೇಲೆ ತೆಗೆದುಕೊಂಡ ಕ್ರಮ.
- 2009 ಹಾಗೂ 2013ನೇ ಸಾಲಿನಲ್ಲಿ ನೇಮಕ ಹೊಂದಿದ ಉಪನ್ಯಾಸಕರುಗಳು ಅನಧಿಕೃತ ಗೈರುಹಾಜರಾದ ಉಪನ್ಯಾಸಕರುಗಳ ವಿವರ ಹಾಗೂ ಅವರ ಮೇಲೆ ತೆಗೆದುಕೊಂಡ ಕ್ರಮದ ವಿವರವಾದ ವರದಿ.

**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ 18ನೇ ಅಡ್ಡ ರಸ್ತೆ, ಬೆಂಗಳೂರು-12.**

## ಜಿಲ್ಲಾ ಉಪ ನಿರ್ದೇಶಕರ ಸಭೆಯ ಅಜಂಡಾ (ಸಿಬ್ಬಂದಿ-3 ಶಾಖೆ)

1) 2015-16 ನೇ ಸಾಲಿಗೆ ಹೊಸ ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಜಿಲ್ಲಾ ಪರಿಶೀಲನಾ ಸಮಿತಿಯನ್ನು ರಚಿಸುವ ಬಗ್ಗೆ

2) ಖಾಸಗಿ ಅನುದಾನಿತ / ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಿಗೆ, ಕಾಲೇಜು ಪ್ರಾರಂಬದಿಂದ, 2014-15ನೇ ಸಾಲಿನವರಗೆ ಮಂಜೂರಾಗಿರುವ ಭಾಷೆ ಹಾಗೂ ಸಂಯೋಜನೆಗಳ ವಿವರಗಳನ್ನು ಮಂಜೂರಾತಿ ನೀಡಿರುವ ಆದೇಶದ ಪ್ರತಿಗಳೊಂದಿಗೆ ಹಾಗೂ ಈ ಕೆಳಕಂಡ ಮಾಹಿತಿಗಳನ್ನು ತರುವುದು.

   a) ಮಂಜೂರಾದ ಸಂಯೋಜನೆವಾರು ಕಳೆದ ಮೂರು ವರ್ಷಗಳಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳ ದಾಖಲಾತಿ / ಹಾಜರಾತಿ ಸಂಖ್ಯೆ (2012-13, 2013-14, 2014-15)

   b) ಮಂಜೂರಾತಿ ಪಡೆದು ದಾಖಲಾತಿ ಮಾಡಿಕೊಳ್ಳದೇ ಇರುವ ಭಾಷೆ, ಸಂಯೋಜನೆಗಳ ವಿವರ (ಯಾವ ವರ್ಷದಿಂದ ದಾಖಲಾತಿ ಇರುವುದಿಲ್ಲವೆಂದು ತಿಳಿಸುವುದು)

   c) ಮಂಜೂರಾತಿ ಪಡಯದೆ ದಾಖಲಾತಿ ಮಾಡಿಕೊಂಡಿರುವ ಭಾಷೆಗಳ ಮತ್ತು ಸಂಯೋಜನೆಗಳು, ಯಾವ ವರ್ಷ, ವಿದ್ಯಾರ್ಥಿಗಳ ಸಂಖ್ಯೆ ವಿವರಗಳನ್ನು ನೀಡುವುದು

3) ಶೂನ್ಯ ಫಲಿತಾಂಶ ಪಡೆದಿರುವ ಕಾಲೇಜುಗಳ ವಿರುದ್ಧ ತೆಗೆದುಕೊಂಡಿರುವ ಕ್ರಮದ ಬಗ್ಗೆ ಮಾಹಿತಿ

4) ಕಾರ್ಯಭಾರವೇ ಇಲ್ಲದ ಹಾಗೂ ಪೂರ್ಣಕಾಲಿಕ ಕಾರ್ಯಭಾರವಿಲ್ಲದ ಉಪನ್ಯಾಸಕರ ಬಗ್ಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ತರತಕ್ಕದ್ದು.

5) ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಸರ್ಕಾರಕ್ಕೆ ಪಾವತಿಸಬೇಕಾದ ಬೋಧನಾ ಶುಲ್ಕವನ್ನು ಪಾವತಿಸದೆ ಇರುವ ಕಾಲೇಜುಗಳ ಪಟ್ಟಿಯನ್ನು ತರುವುದು. ಮತ್ತು ಪಾವತಿಸದೆ ಇರುವ ಕಾಲೇಜುಗಳ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ.(ಪ್ರಸ್ತುತ 2014-15ರ ವರೆಗೆ)

6) ದಿ: 01-06-1987 ರಿಂದ 94-95, ರವರೆಗೆ ಪ್ರಾರಂಭಿಸಿದ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳು ಅನುದಾನಕ್ಕೆ ಒಳಪಡದೇ ಇರುವ ಕಾಲೇಜುಗಳ ಪಟ್ಟಿ,

7) ಜಿಲ್ಲೆಯ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗ್ರಂಥಪಾಲಕ ಮತ್ತು ದೈಹಿಕ ಶಿಕ್ಷಕರ ಮಾಹಿತಿ

8) ಜಿಲ್ಲೆಯ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ನಿಧನ, ನಿವೃತ್ತಿ ಮತ್ತು ರಾಜೀನಾಮೆಯಿಂದ ತೆರವಾದ ಗ್ರಂಥಪಾಲಕ ಮತ್ತು ದೈಹಿಕ ಶಿಕ್ಷಕ ಹುದ್ದೆಗಳ ಮಾಹಿತಿ ಹುದ್ದೆ ಉದ್ಭವವಾದ ದಿನಾಂಕಗಳೊಂದಿಗೆ ಸಲ್ಲಿಸುವುದು,

9) ಜಿಲ್ಲೆಯ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಲ್ಲಿ ಈ ವರವಿಗೆ ನಿವೃತ್ತಿ ನಿಧನ ಮತ್ತು ರಾಜೀನಾಮೆಯಿಂದ ತೆರವಾದ ಎಲ್ಲಾ ವೃಂದದ ಬೋಧಕೇತರ ಹುದ್ದೆಗಳ ಮಾಹಿತಿ ಉದ್ಭವವಾದ ದಿನಾಂಕಗಳೊಂದಿಗೆ ಸಲ್ಲಿಸುವುದು

10) 01-06-87 ರಿಂದ 94-95 ನೇಸಾಲಿನವರಗೆ ಪ್ರಾರಾಭಿಸಿದ, ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳನ್ನು ಸರ್ಕಾರ ಸಹಾಯನುದಾನಕ್ಕೆ ಬಳಪಟಿಸಿ 03 ವರ್ಷಗಳ ಒಳಗಾಗಿ ಕಾಲೇಜಿಗೆ ಅಗತ್ಯ ಮೂಲಭೂತ ಸೌಕರ್ಯ ಬದಗಿಸಿಕೊಳ್ಳಲು ಷರತ್ತು ವಿಧಿಸಿದೆ. ಅದರಂತೆ ಪೂರೈಸಿದ/ಪೂರೈಸದೇ ಇರುವ ಕಾಲೇಜುಗಳ ಮಾಹಿತಿ ಲಗತ್ತಿಸಿದ ನಮೂನೆಯಲ್ಲಿ

11) ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಕನ್ನಡ ಭಾಷಾ ಪರೀಕ್ಷೆ ಪಾಸಾದುದಕ್ಕೆ ವಿನಾಯ್ತಿ ಪಡೆದವರಿಗೆ ಒಂದು ಹೆಚ್ಚುವರಿ ವೇತನ ಬಡ್ತಿ ನೀಡಲು ನ್ಯಾಯಾಲಯ ಆದೇಶ ಪಡೆದ ಸಿಬ್ಬಂದಿ ಮಾಹಿತಿ

12) 2014-15 ನೇ ಸಾಲಿನವರಗೆ ಖಾಸಗಿ ಪದವಿ ಪೂರ್ವ ಕಾಲೇಜುಗಳ ಮಾನ್ಯತೆ ನವೀಕರಿಸಲು ಅಗತ್ಯಶುಲ್ಕ ಪಾವತಿಸಿದ ಕಾಲೇಜುಗಳ ಮಾಹಿತಿ.

ಶೈಕ್ಷಣಿಕ – ಶಾಖೆ

(1)

**2014ರ ಸೆಪ್ಟೆಂಬರ್ ತಿಂಗಳಿನ ಮೊದಲನೇ ವಾರದಲ್ಲಿ ನಡೆಯುವ ಜಿಲ್ಲಾ ಉಪನಿರ್ದೇಶಕರ ಸಭೆಗೆ ಶೈಕ್ಷಣಿಕ ಶಾಖೆ ಹಾಗೂ ಮೂಲಭೂತ ಸೌಕರ್ಯಗಳ ಶಾಖೆಯ ಅಜೆಂಡಾ ವಿಷಯಗಳು ಈ ಕೆಳಕಂಡಂತಿವೆ:**

**ಶೈಕ್ಷಣಿಕ ಶಾಖೆ:**

1. 2014–15ನೇ ಸಾಲಿನಲ್ಲಿ ದಾಖಲಾದ ವಿದ್ಯಾರ್ಥಿಗಳ ಮಾಹಿತಿಯನ್ನು ಈ ನಿರ್ದೇಶನಾಲಯದ ಶೈಕ್ಷಣಿಕ ಮಾರ್ಗಸೂಚಿಯಂತೆ ಹಾಗೂ ಪತ್ರ ಸಂಖ್ಯೆ ಪಪೂಶಿ/ಶೈಶಾ–04/ದಾ.ಅ./2014–15 ದಿನಾಂಕ 04–08–2014ರಲ್ಲಿ ತಿಳಿಸಿದಂತೆ ಪ್ರೋಫಾರ್ಮಾ–ಎ ಮತ್ತು ಇತರೆ ದಾಖಲೆಗಳೊಂದಿಗೆ ಸಲ್ಲಿಸುವುದು.
2. ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ವೇಳಾಪಟ್ಟಿಯನ್ನು ಹಾರ್ಡ್ ಕಾಪಿಯಲ್ಲಿ ಕ್ರೋಢೀಕರಿಸಿ ಪುಸ್ತಕ ರೂಪದಲ್ಲಿ ಸಾಫ್ಟ್ ಕಾಪಿಯೊಂದಿಗೆ ಸಲ್ಲಿಸುವುದು.
3. ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯರ ಸಂಖ್ಯೆಯನ್ನು ಕ್ಯಾಟಗರಿವಾರು ಶುಲ್ಕ ಮರುಪಾವತಿಗಾಗಿ ಸಲ್ಲಿಸುವುದು.
4. 2014–15ನೇ ಸಾಲಿನ ತಮ್ಮ ಜಿಲ್ಲಾ ವ್ಯಾಪ್ತಿಯ ಪದವಿ ಪೂರ್ವ ಕಾಲೇಜುಗಳಿಂದ ಬರುವ ವಿಶೇಷ ಕ್ರೀಡಾ ಶುಲ್ಕದ ಡಿ.ಡಿ. ಗಳನ್ನು ಪಡೆದು ಕ್ರೋಢೀಕರಿಸಿ ಸಲ್ಲಿಸುವುದು.
5. 2014–15ನೇ ಸಾಲಿನ ಕನ್ನಡ ಮಾಧ್ಯಮ ಪ್ರಶಸ್ತಿ ಸಮಾರಂಭಕ್ಕೆ ಈಗಾಗಲೇ ತಿಳಿಸಿರುವಂತೆ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ವಿವರಗಳನ್ನು ತುರ್ತಾಗಿ ಸಲ್ಲಿಸುವುದು.
6. 2012–13ನೇ ಸಾಲಿನಲ್ಲಿ ಅತೀ ಹೆಚ್ಚು ಅಂಕ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ನೀಡಿದ ಬೇಡಿಕೆ ಹುಂಡಿಯನ್ನು ಜಿಲ್ಲಾ ಉಪನಿರ್ದೇಶಕರಿಗೆ ಕಳುಹಿಸಿಕೊಟ್ಟಿದ್ದು, ಸದರಿ ಹಣವನ್ನು ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ವಿತರಿಸಿದ ಬಗ್ಗೆ ಬಳಕೆ ಪ್ರಮಾಣ ಪತ್ರ ಸಲ್ಲಿಸುವುದು.

**ಮೂಲಭೂತ ಸೌಕರ್ಯಗಳು:**

1. ನಬಾರ್ಡ ಸಹಯೋಗದ ಆರ್ಐಡಿಎಫ್–19ಕ್ಕೆ ಸಂಬಂಧಿಸಿದಂತೆ ಈಗಾಗಲೇ ನೀಡಿರುವ ಜಿಲ್ಲಾವಾರು ಪಟ್ಟಿಯಂತೆ ಪ್ರಾಂಶುಪಾಲರು ನಿವೇಶನವನ್ನು ಕೆಆರ್ಐಡಿಎಲ್ ರವರಿಗೆ ಹಸ್ತಾಂತರಿಸಿರುವ ಬಗ್ಗೆ ಪೂರ್ಣ ಮಾಹಿತಿ ಸಲ್ಲಿಸುವುದು.
2. ಆರ್ಐಡಿಎಫ್–19ನೇ ಯೋಜನೆಯಡಿ ಅನುಮೋದನೆಗೊಂಡ ಕಾಮಗಾರಿಗಳ ಅಂದಾಜು ಪಟ್ಟಿಯನ್ನು ಕೆಆರ್ಐಡಿಎಲ್ ರವರು ಸ್ಥಳಪರಿಶೀಲನೆ ನಡೆಸಿ ಸಿದ್ದಪಡಿಸಿರುವ ಬಗ್ಗೆ ಪ್ರಾಂಶುಪಾಲರು ಸಹಿ ಮಾಡಿರುವ ಬಗ್ಗೆ ಮಾಹಿತಿಯನ್ನು ಸಲ್ಲಿಸುವುದು.
3. ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಪಾಠೋಪಕರಣ, ಪೀಠೋಪಕರಣ ಮತ್ತು ವಿಜ್ಞಾನ ಪ್ರಯೋಗಾಲಯ ಉಪಕರಣಗಳ ಅವಶ್ಯಕತೆಯ ಬಗ್ಗೆ ಕಾಲೇಜು ಸಂಕೇತ ಸಂಖ್ಯೆಯೊಂದಿಗೆ ಕಾಲೇಜುವಾರು ವಿವರವನ್ನು ಸಲ್ಲಿಸುವುದು.
4. ಶ್ರೀ ವಿಶ್ವನಾಥ ಈ ಪಾಟೀಲ್, (ಬೈಲಹೊಂಗಲ), ಮಾನ್ಯ ವಿಧಾನ ಸಭಾ ಸದಸ್ಯರು, ಇವರ ಪ್ರಶ್ನೆ ಸಂಖ್ಯೆ 2175, ಶ್ರೀ ಗೋ. ಮಧುಸುಧನ್ (ಪದವಿಧರರ ಕ್ಷೇತ್ರದಿಂದ ಚುನಾಯಿತರಾದವರು), ವಿಧಾನ ಪರಿಷತ್ ಸದಸ್ಯರು, ಇವರ ಪ್ರಶ್ನೆ ಸಂಖ್ಯೆ 2000 ಮತ್ತು ಶ್ರೀ ಎಂ. ಕೃಷ್ಣಾರೆಡ್ಡಿ (ಚಿಂತಾಮಣಿ), ಮಾನ್ಯ ವಿಧಾನ ಸಭಾ ಸದಸ್ಯರು, ಇವರ ಪ್ರಶ್ನೆ ಸಂಖ್ಯೆ 4814ಗೆ ಉತ್ತರವನ್ನು ಸಲ್ಲಿಸಲು ಸೂಚಿಸಿದ್ದು, ಈವರೆವಿಗೂ ಬಾರದ ಹಿನ್ನೆಲೆಯಲ್ಲಿ ಆಧ್ಯತೆಯ ಮೇರೆಗೆ ಸದರಿ ಉತ್ತರವನ್ನು ಸಿದ್ದಪಡಿಸಿ ಖುದ್ದು ತರಲು ಸೂಚಿಸಿದೆ.

28/8/14

ಪ್ರಭಾರಿ ಉಪನಿರ್ದೇಶಕರು (ಶೈಕ್ಷಣಿಕ ಮತ್ತು ಮೂ.ಸೌ.)
ಪದವಿ ಪೂರ್ವ ಶಿಕ್ಷಣ ಇಲಾಖೆ

ಶೈಕ್ಷಣಿಕ – ಶಾಖೆ

(2)

ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿ/ಶೈಶಾ-04/2014-15

ನಿರ್ದೇಶಕರ ಕಛೇರಿ
ಪದವಿ ಪೂರ್ವ ಶಿಕ್ಷಣ ಇಲಾಖೆ
18ನೇ ಕ್ರಾಸ್,ಸಂಪಿಗೆ ರಸ್ತೆ
ಮಲ್ಲೇಶ್ವರಂ ಬೆಂಗಳೂರು-12
ದಿನಾಂಕ: 28.08.2014

Agenda

ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಸೆಪ್ಟೆಂಬರ್ 2014ರಲ್ಲಿ ನಡೆಯಲಿರುವ ಜಿಲ್ಲಾ ಉಪನಿರ್ದೇಶಕರ ಸಭೆಗೆ ಶೈಕ್ಷಣಿಕ ಶಾಖೆಗೆ ಸಂಬಂಧಿಸಿದ ಅಜೆಂಡ ವಿಷಯಗಳ ಮಾಹಿತಿಯನ್ನು ಈ ಕೆಳಗೆ ನಮೂದಿಸಿ ಸಲ್ಲಿಸಿದೆ.

| ಕ್ರಮ ಸಂಖ್ಯೆ | ಅಜೆಂಡ |
| --- | --- |
| 1. | 2013-14ನೇ ಶೈಕ್ಷಣಿಕ ಸಾಲಿನಲ್ಲಿ ತಮ್ಮ ತಮ್ಮ ಜಿಲ್ಲೆಗಳಲ್ಲಿ ನಡೆಸಿದ ಜಿಲ್ಲಾ ವಿಭಾಗೀಯ /ರಾಜ್ಯ ಮಟ್ಟದ ಸಾಂಸ್ಕೃತಿಕ ಚಟುವಟಿಕೆಗಳಿಗೆ ಬಿಡುಗಡೆ ಮಾಡಲಾಗಿದ್ದ ಅನುದಾನಕ್ಕೆ ಸಂಬಂಧಿಸಿದ ಬಳಕೆ ಪ್ರಮಾಣ ಪತ್ರ ಮತ್ತು ಸುತ್ತೋಲೆಯಲ್ಲಿ ತಿಳಿಸಿದ್ದ ಎಲ್ಲಾ ದಾಖಲೆಗಳನ್ನು ನೀಡುವುದು. |
| 2. | 2014-15ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಮತ್ತು ದ್ವಿತೀಯ ಪಿಯುಸಿಗೆ ದಾಖಲಾಗಿರುವ ವಿದ್ಯಾರ್ಥಿಗಳ ವಿಷಯವಾರು ಮಾಹಿತಿ (ದಿನಾಂಕ 30.08.2014 ರಂತೆ) (ಶೈಕ್ಷಣಿಕ ಶಾಖೆಯಿಂದ ಈಗಾಗಲೇ ಉಚ್ಚ ನ್ಯಾಯಾಲಯದ ಉಲ್ಲೇಖ ಮಾಡಿ ಮಾಹಿತಿ ಕೋರಿದ್ದರೂ ಹಲವಾರು ಜಿಲ್ಲೆಗಳಿಂದ ಮಾಹಿತಿ ಬಂದಿರುವುದಿಲ್ಲ. ನಿಗಧಿ ಪಡಿಸಿರುವ ನಮೂನೆ ಮತ್ತು ಕ್ರಮದಲ್ಲಿ ಈಗಾಗಲೇ ಕೊಟ್ಟಿರುವ e-mailಗೆ ಮಾಹಿತಿ ಕಳುಸುವುದರ ಜೊತೆಗೆ ತಪ್ಪದೆ ಸಭೆಯ ದಿನದಂದು ದೃಢೀಕೃತ ಪಟ್ಟಿ ನೀಡುವುದು). |

28/8/14
ಸಹಾಯಕ ನಿರ್ದೇಶಕರು
(ಶೈಕ್ಷಣಿಕ ಶಾಖೆ)
ಪದವಿ ಪೂರ್ವ ಶಿಕ್ಷಣ ಇಲಾಖೆ

# ಪರೀಕ್ಷಾ ವಿಭಾಗ

**ಕೇಂದ್ರ ಕಛೇರಿಯಲ್ಲಿ ಜಿಲ್ಲಾ ಉಪನಿರ್ದೇಶಕರ ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು:**

1. ದ್ವಿತೀಯ ಪಿಯುಸಿ ಖಾಸಗಿ ಅಭ್ಯರ್ಥಿಗಳ ಪ್ರವೇಶ ಪ್ರಕ್ರಿಯ ಬಗ್ಗೆ.
2. 2015ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಪುನರಾವರ್ತಿ ಅಭ್ಯರ್ಥಿಗಳ ಓ.ಎಂ.ಆರ್. ಅರ್ಜಿ ಕಳುಹಿಸಿಕೊಡುವ ಬಗ್ಗೆ.
3. 2014–15ನೇ ಸಾಲಿನ ದ್ವಿತೀಯ ಪಿಯುಸಿ ತರಗತಿಗಳಿಗೆ ಕಾಲೇಜು ಬದಲಾವಣೆ ಪ್ರಸ್ತಾವನೆ ಬಗ್ಗೆ.
4. 2014ರ ದ್ವಿತೀಯ ಪಿಯುಸಿ ಪ್ರಾಯೋಗಿಕ, ವಾರ್ಷಿಕ ಹಾಗೂ ಪೂರಕ ಪರೀಕ್ಷೆಯ ಪರೀಕ್ಷಾ ಕೇಂದ್ರಗಳಲ್ಲಿ ಬಳಕೆಯಾಗದೆ ಉಳಿದಿರುವ ಉತ್ತರ ಪತಿಕೆಗಳ ಬಗ್ಗೆ.
5. 2014 ರ ದ್ವಿತೀಯ ಪಿಯುಸಿ ವಾರ್ಷಿಕ ಹಾಗೂ ಪೂರಕ ಪರೀಕ್ಷೆಯ ಉತ್ತೀರ್ಣ ಪ್ರಮಾಣ ಪತ್ರಗಳನ್ನು ವಿತರಿಸುವ ಬಗ್ಗೆ.

## ದಿನಾಂಕ ೨೦ -09-2014 ರಂದು ನಡೆಯಲಿರುವ ಎಲ್ಲಾ ಉಪನಿರ್ದೇಶಕರುಗಳ ಸಭೆಯಲ್ಲಿ ಚರ್ಚಿಸಲು ಲೆಕ್ಕಪತ್ರಶಾಖೆಗೆ ಸಂಬಂಧಿಸಿದ ಅಜೆಂಡಾ

1. ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಬೋಧಕ/ಬೋಧಕೇತರ ಸಿಬ್ಬಂದಿ ವೇತನಕ್ಕಾಗಿ ಲೆಕ್ಕ ಶೀರ್ಷಿಕೆ **2202-02-110-3-01 ಯೋಜನೇತರ** ಅಡಿ 2014-15ನೇ ಸಾಲಿನ ಪೂರ್ಣಾವಧಿಗೆ ಅನುದಾನ ಬಿಡುಗಡೆಗೊಳಿಸಲಾಗಿದೆ. ಯೋಜನೇತರ ಅಡಿ ಒಳಪಡುವ ಬೋಧಕ/ಬೋಧಕೇತರ ಸಿಬ್ಬಂದಿ ವೇತನ ವೆಚ್ಚ, ತುಟ್ಟಿ ಭತ್ಯೆ ಬಾಕಿ ಹಾಗೂ ಹಿಂದಿನ ವೇತನ ಬಾಕಿಗಳನ್ನು ವೇತನ ಬಾಕಿ, ಗಳಿಕೆ ರಜೆ ನಗದೀಕರಣ ವೆಚ್ಚಗಳನ್ನು ಪೂರ್ಣವಾಗಿ ಭರಿಸಲು ಸೂಚಿಸಿದೆ. ನಿವೃತ್ತಿ/ನಿಧನ ಗಳಿಕೆ ರಜೆ ನಗದೀಕರಣ ವೆಚ್ಚಕ್ಕೆ ನಿರ್ದೇಶನಾಲಯ ಲೆಕ್ಕಾಧಿಕಾರಿಗಳಿಂದ ಅನುಮತಿ ಪಡೆದು ವೆಚ್ಚ ಭರಿಸಲು ಸೂಚಿಸಿದೆ. ಫೆಬ್ರವರಿ-2015ರವರೆಗಿನ ಮಾಹೆಗಳ ವೇತನವನ್ನು ಲೆಕ್ಕಾಚಾರ ಮಾಡಿ ಸದರಿ ಲೆಕ್ಕಶೀರ್ಷಿಕೆಯಡಿ ಹೆಚ್ಚುವರಿ ಬೇಕಾಗಬಹುದಾದ ಅನುದಾನ ಅಥವಾ ನಿರೀಕ್ಷಿತ ಉಳಿತಾಯದ ಮಾಹಿತಿಯನ್ನು ಲೆಕ್ಕಾಧಿಕಾರಿಗಳಿಗೆ ಒದಗಿಸಲು ಸೂಚಿಸಿದೆ.

2. ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಬೋಧಕ/ಬೋಧಕೇತರ ಸಿಬ್ಬಂದಿ ವೇತನಕ್ಕಾಗಿ ಲೆಕ್ಕ ಶೀರ್ಷಿಕೆ **2202-02-110-3-01 ಯೋಜನೆ ಯಡಿ** ಬಿಡುಗಡೆಗೊಳಿಸಿದ ಅನುದಾನದಲ್ಲಿ 2014-15ನೇ ಸಾಲಿನ ಆಗಸ್ಟ್ 2014 ರವರೆಗಿನ ವೇತನ ಭತ್ಯೆ ಪಾವತಿಸಲು ಮೊದಲ ಆದ್ಯತೆ ನೀಡಲು ತಿಳಿಸಲಾಗಿದೆ. 2014-15ನೇ ಸಾಲಿನಲ್ಲಿ ಈವರೆಗೆ ಬಿಡುಗಡೆ ಮಾಡಿರುವ ಅನುದಾನಗಳಲ್ಲಿ ಆಗಸ್ಟ್ 2014ರ ಅಂತ್ಯದವರೆಗೆ ವೇತನ ವೆಚ್ಚ ಭರಿಸಲು ಕೊರತೆಯಾಗುವ ಅನುದಾನ ಮುಂದಿನ ಅವಧಿಯ ಫೆಬ್ರವರಿ 2015ರ ಅಂತ್ಯದವರೆಗೆ ವೇತನಕ್ಕಾಗಿ ಅವಶ್ಯವಿರುವ ಅನುದಾನದ ಮಾಹಿತಿಯನ್ನು ಲೆಕ್ಕಾಧಿಕಾರಿಗಳಿಗೆ ಸಲ್ಲಿಸಲು ಸೂಚಿಸಿದೆ.

3. **2013-14ನೇ ಸಾಲಿನಲ್ಲಿ ಹೊಸದಾಗಿ ಅನುದಾನಕ್ಕೊಳಪಟ್ಟ** ಎಲ್ಲಾ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಮಾಹಿತಿಯನ್ನು ಹುದ್ದೆ/ಕಾಲೇಜು ಅನುದಾನಕ್ಕೊಳಪಟ್ಟ ಸರ್ಕಾರದ ಆದೇಶ, ನಿರ್ದೇಶಕರ ಆದೇಶ, ಹಾಗೂ ಲೆಕ್ಕಪತ್ರಶಾಖೆಯಿಂದ ಪ್ರಥಮ ವೇತನ ನಿಗಧಿಪಡಿಸಿದ ಜ್ಞಾಪನದ ಪ್ರತಿಗಳನ್ನು ಲಗತ್ತಿಸಿ ಇದರೊಂದಿಗೆ ಲಗತ್ತಿಸಲಾದ **ಅನುಬಂಧದಲ್ಲಿ** (Annexure) ಮಾಹಿತಿಯನ್ನು ಒದಗಿಸಲು ಸೂಚಿಸಿದೆ.

4. 2014ರ ದ್ವಿತಿಯ ಪಿಯುಸಿ ವಾರ್ಷಿಕ ಪರೀಕ್ಷೆಯ ತತ್ವಭಾಗದ ಪರೀಕ್ಷೆ ನಡೆಸಿದ ಪರೀಕ್ಷಾ ಕೇಂದ್ರಗಳಿಗೆ, 2014ರ ದ್ವಿತಿಯ ಪಿಯುಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷೆ ನಡೆಸಿದ ಪರೀಕ್ಷಾ ಕೇಂದ್ರಗಳಿಗೆ, ಮತ್ತು 2014 ಜುಲೈ ಸಪ್ಲಿಮೆಂಟರಿ ವಾರ್ಷಿಕ ಪರೀಕ್ಷೆಯ ತತ್ವಭಾಗದ ಪರೀಕ್ಷೆ ನಡೆಸಿದ ಪರೀಕ್ಷಾ **ಕೇಂದ್ರಗಳಿಗೆ ಸಾದಿಲ್ವಾರು ಹಣ ಮತ್ತು ಅಂಚೆಚೀಟಿ ವೆಚ್ಚದ ಹಣ ಬಿಡುಗಡೆಗೊಳಿಸಲು** ಜಿಲ್ಲಾ ಉಪನಿರ್ದೇಶಕರುಗಳಿಗೆ ಪರೀಕ್ಷಾ ಶಾಖೆಯಿಂದ ಹಂಚಿಕೆ ಮಾಡಲಾದ ಮೊತ್ತವನ್ನು **ದಿನಾಂಕ 11-08-2014** ರಂದೇ TNMCಗೆ Upload ಮಾಡಲಾಗಿದ್ದು ಶೀಘ್ರವಾಗಿ ವೆಚ್ಚಭರಿಸಲು ಸೂಚಿಸಲಾಗಿತ್ತು. ಸದರಿ ಲೆಕ್ಕಶೀರ್ಷಿಕೆಯಡಿ ನೀಡಲಾಗಿರುವ ಅನುದಾನದ ವೆಚ್ಚಮಾಡಿರುವ ಬಗ್ಗೆ ಮತ್ತು ಉಳಿಕೆಯಾಗಿರುವ ಬಗ್ಗೆ ಲೆಕ್ಕಪತ್ರಶಾಖೆಗೆ ಮಾಹಿತಿ ಒದಗಿಸಲು ಸೂಚಿಸಿದೆ.

5. ದಿನಾಂಕ 04-08-2014ರಂದು ಸಹಾಯಕ ನಿರ್ದೇಶಕರು-ಪರೀಕ್ಷೆ ರವರು ಕರೆ ಮಾಡಿ ತಿಳಿಸಿದಂತೆ ಮಾರ್ಚ್/ಏಪ್ರಿಲ್ 2014 ದ್ವಿತೀಯ ಪಿಯುಸಿ ಮುಖ್ಯಪರೀಕ್ಷೆ ಮತ್ತು ಜೂನ್/ಜುಲೈ 2014ರ ದ್ವಿತೀಯ ಪಿಯುಸಿ ಸಪ್ಲಿಮೆಂಟರಿಪರೀಕ್ಷೆಗಳಿಗೆ ನಿಯೋಜಿತರಾಗಿದ್ದ ವಿಶೇಷ ಜಾಗೃತ ದಳ, ಪ್ರಶ್ನೆ ಪತ್ರಿಕೆಪಾಲಕರು, ಖಜಾನೆ ಸಿಬ್ಬಂದಿ, ಪರೀಕ್ಷಾ ಕೇಂದ್ರ ಸಿಬ್ಬಂದಿಗಳ ಸಂಭಾವನೆ ಮತ್ತು ಪ್ರಯಾಣ ಭತ್ಯೆ ಬಿಲ್ಲುಗಳು ಹಾಗೂ ಪರೀಕ್ಷಾ ಸಾದಿಲ್ವಾರು ವೆಚ್ಚದ ಬಿಲ್ಲುಗಳನ್ನು (ಹಿಂದಿನ ವರ್ಷಗಳಲ್ಲಿ ಈ ವೆಚ್ಚಗಳಿಗೆ ಸಂಬಂಧಿಸಿದಂತೆ ಅನುದಾನಕೊರತೆ/ತಾಂತ್ರಿಕ ಕಾರಣಗಳಿಗಾಗಿ ಪಾವತಿಸಲಾಗದೇ ಬಿಲ್ಲುಗಳು ಬಾಕಿ ಉಳಿದಿದ್ದಲ್ಲಿ ಉಪನಿರ್ದೇಶಕರ ವಿವರಣೆಯೊಂದಿಗೆ ಆ ಬಿಲ್ಲುಗಳೂ ಸೇರಿದಂತೆ) ತಮ್ಮ ಜಿಲ್ಲಾ ವ್ಯಾಪ್ತಿಗೆ ಬರುವ ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳಿಂದ ಆಯಾ ಜಿಲ್ಲಾ ಉಪ- ನಿರ್ದೇಶಕರ ಕಛೇರಿಗೆ ತರಿಸಿಕೊಂಡು, ಜಿಲ್ಲಾ ಉಪನಿರ್ದೇಶಕರ ಕಛೇರಿಯಲ್ಲಿ ಸದರಿ ಬಿಲ್ಲುಗಳನ್ನು ಪರಿಶೀಲಿಸಿ ನಿಯಮಾನುಸಾರ

--2

ಪಾವತಿಗೆ ಅರ್ಹವಾದ ಮೊತ್ತಗಳನ್ನು ಮಾತ್ರ ಶೀರ್ಷಿಕೆವಾರು ಪ್ರತ್ಯೇಕವಾಗಿ ಒಂದು ವಹಿಯಲ್ಲಿ ನಮೂದಿಸಿ ಸಿದ್ಧಪಡಿಸಿಟ್ಟುಕೊಂಡು ಅನುದಾನದ ಕೋರಿಕೆ ಸಲ್ಲಿಸಲು ತಿಳಿಸಲಾಗಿತ್ತು. ಆದರೆ, ಈವರೆವಿಗೂ ಒಟ್ಟು 17 ಜಿಲ್ಲಾ ಉ.ನಿ. ರವರಿಂದ ಮಾತ್ರ ಮಾಹಿತಿಗಳು ಸ್ವೀಕೃತವಾಗಿದ್ದು ಈ ಕೆಳಕಂಡ ಜಿಲ್ಲೆಗಳಿಂದ ಮಾಹಿತಿ ಸಲ್ಲಿಕೆಯಾಗಿರುವುದಿಲ್ಲ.

| ಕ್ರಮ ಸಂಖ್ಯೆ | ಜಿಲ್ಲೆ |
|---|---|
| 1 | ಬೆಂಗಳೂರು ಉತ್ತರ |
| 2 | ಬೆಂಗಳೂರು ದಕ್ಷಿಣ |
| 3 | ಬಳ್ಳಾರಿ |
| 4 | ಬಾಗಲಕೋಟೆ |
| 5 | ಚಿತ್ರದುರ್ಗ |
| 6 | ಚಿಕ್ಕಮಗಳೂರು |
| 7 | ಗದಗ |
| 8 | ಹಾವೇರಿ |
| 9 | ಧಾರವಾಡ |
| 10 | ಯಾದಗಿರಿ |
| 11 | ಮಂಡ್ಯ |
| 12 | ಕೊಪ್ಪಳ |
| 13 | ರಾಯಚೂರು |
| 14 | ತುಮಕೂರು |

ಎಲ್ಲಾ ಜಿಲ್ಲೆಗಳಿಂದ ಮಾಹಿತಿ ಬಾರದಿರುವುದರಿಂದ ಲಭ್ಯವಿರುವ ಅನುದಾನ ಈ ವರ್ಷದ ವೆಚ್ಚಗಳಿಗೆ ಹೊಂದಾಣಿಕೆಯಾಗುವ ಅಥವಾ ಕೊರತೆ ಬೀಳುವ ಬಗ್ಗೆ ಲೆಕ್ಕಾಚಾರ ಮಾಡಲು ಅವಶ್ಯಕವಾಗಿದ್ದು ತುರ್ತಾಗಿ ಈ ಕಛೇರಿಗೆ ಕೋರಿರುವ ಮಾಹಿತಿಯನ್ನು ಸಲ್ಲಿಸಲು ಸೂಚಿಸಿದೆ.

6. ಕಛೇರಿ ಸುತ್ತೋಲೆಗಳಾದ (1)ಪಪೂಶಿ/ಲೆಪ-03/ಆಯವ್ಯಯ/01/2013-14, ದಿ: 12-08-2013 (2) ಪಪೂಶಿ/ಲೆಪ-3/ಆಯವ್ಯಯ/ 02/2013-14, ದಿ: 16-08-2013 ಗಳಂತೆ, ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಬೋಧಕ/ಬೋಧಕೇತರ ಸಿಬ್ಬಂದಿ ವೇತನಾನುದಾನಕ್ಕಾಗಿ ಯೋಜನೆ/ಯೋಜನೇತರ ಅಡಿಯಲ್ಲಿ ಬಿಡುಗಡೆಯಾದ ಅನುದಾನ/ವೆಚ್ಚದ ಮಾಹಿತಿಗಳನ್ನು ಮತ್ತು ನಿರ್ದೇಶನಾಲಯದಿಂದ 2014-15ನೇ ಸಾಲಿನಲ್ಲಿ ಜಿಲ್ಲಾ ಉಪನಿರ್ದೇಶಕರ ಕಛೇರಿಗಳಿಗೆ/ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ವಿವಿಧ ಲೆಕ್ಕಶೀರ್ಷಿಕೆಗಳಡಿ (ಯೋಜನೆ ಮತ್ತು ಯೋಜನೇತರ) ಬಿಡುಗಡೆಯಾದ ಅನುದಾನ ಮತ್ತು ವೆಚ್ಚದ ಮಾಹಿತಿಯನ್ನು ಪ್ರತಿ ತಿಂಗಳು 10ನೇ ದಿನಾಂಕದೊಳಗೆ ಸಲ್ಲಿಸಲು ಸೂಚಿಸಲಾಗಿದೆ. ಆಯಾ ಜಿಲ್ಲಾ ಉ.ನಿ. ಕಛೇರಿ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಆಯಾ ತಿಂಗಳ 62 ಬಿ ನಮೂನೆಗಳನ್ನು ಕ್ರೋಢೀಕರಿಸಿ ಸಮನ್ವಯಗೊಳಿಸಿ ಸಿದ್ಧಪಡಿಸಿದ ವರದಿಯನ್ನು ಲೆಕ್ಕಾಧಿಕಾರಿಗಳಿಗೆ ಸಲ್ಲಿಸಬೇಕು. ಕಾಲೇಜುಗಳಿಂದ ನೇರವಾಗಿ 62 ಬಿ ನಮೂನೆ ನಿರ್ದೇಶನಾಲಯಕ್ಕೆ ಕಳುಹಿಸಲು ಅವಕಾಶ ನೀಡಬಾರದೆಂದು ತಿಳಿಯಪಡಿಸಿದೆ.

7. ನಿರ್ದೇಶನಾಲಯದ ಪತ್ರ ಸಂಖ್ಯೆ: ಪಪೂಶಿಇ/ಎಜಿ ಬಾಕಿ ಪ್ಯಾರಗಳು/2011-12, ದಿ: 19-08-2014 ರಲ್ಲಿ ತಿಳಿಸಿರುವಂತೆ, ಮಹಾಲೇಖಪಾಲರ ಲೆಕ್ಕಪರಿಶೋಧನಾ ವರದಿಗಳಲ್ಲಿ ಇದುವರೆವಿಗೆ ತೀರುವಳಿಯಾಗದೇ ಬಾಕಿ ಉಳಿದಿರುವ ಕಂಡಿಕೆಗಳ ತೀರುವಳಿಗೆ ಶೀಘ್ರ ಕ್ರಮ ಕೈಗೊಳ್ಳಲು ಮಹಾಲೇಖಪಾಲರು, ಬೆಂಗಳೂರು -

---3

-ರವರು ನಿರ್ದೇಶಿಸಿರುತ್ತಾರೆ. ಸಂಬಂಧಪಟ್ಟಂತೆ, ಅನುಸರಣಾ ವರದಿಯು ಇದುವರೆವಿಗೂ ನೀಡದೇ ಇರುವ ಬಗ್ಗೆ ಸರ್ಕಾರದಿಂದ ನೆನಪೋಲೆಗಳು ಬರುತ್ತಿರುವುದರಿಂದ ಹಾಗೂ ಅಡ್‌ಹಾಕ್ ಸಭೆ ಶೀಘ್ರದಲ್ಲಿ ಸೇರಲಿರುವುದಾಗಿ ಮಾನ್ಯ ಕಾರ್ಯದರ್ಶಿಗಳು ತಿಳಿಸಿರುವುದರಿಂದ ತುರ್ತಾಗಿ ಅನುಸರಣಾ ವರದಿಯನ್ನು ಸರ್ಕಾರಕ್ಕೆ ಹಾಗೂ ಮಹಾಲೇಖಪಾಲರಿಗೆ ಸಲ್ಲಿಸಬೇಕಾಗಿರುತ್ತದೆ. ಆದುದರಿಂದ ನಿಮ್ಮ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಇದುವರೆಗೆ ತೀರುವಳಿ ಆಗದೇ ಬಾಕಿ ಉಳಿದಿರುವ ಪ್ಯಾರಗಳನ್ನು ಹಾಗೂ ನಿಮ್ಮ ಕಛೇರಿಯಲ್ಲಿ ತೀರುವಳಿಯಾಗದೇ ಉಳಿಸಿಕೊಂಡಿರುವ ಲೆಕ್ಕತಪಾಸಣಾ ವರದಿಗಳಲ್ಲಿನ ಆಕ್ಷೇಪಣಾ ಕಂಡಿಕೆಗಳಿಗೆ ಅನುಪಾಲನಾ ವರದಿಯನ್ನು ನಿಗಧಿತ ನಮೂನೆಯಲ್ಲಿ ತಯಾರಿಸಿ ದೃಢೀಕೃತ ಪೂರಕ ಅಗತ್ಯ ದಾಖಲೆಗಳೊಂದಿಗೆ ದೃಢೀಕರಿಸಿ ಉತ್ತರಗಳೊಂದಿಗೆ ಲಗತ್ತಿಸಿ ಮಹಾಲೇಖಪಾಲರಿಗೆ ಕಳುಹಿಸಲಾದ ಉತ್ತರಗಳ ಒಂದು ಪ್ರತಿಯನ್ನು ನಿರ್ದೇಶನಾಲಯಕ್ಕೆ ನೀಡಲು ತಿಳಿಸಲಾಗಿರುತ್ತದೆ.

ಮಹಾಲೇಖಪಾಲರ ಆಡಿಟ್ ವರದಿಗಳಲ್ಲಿ ದಿನಾಂಕ 30-06-2014ವರಗೆ ಬಾಕಿ ಇರುವ ಪ್ಯಾರಗಳ ವಿವಿರ

| ಕ್ರಮ ಸಂಖ್ಯೆ | ಜಿಲ್ಲೆ | ಉಪ ನಿರ್ದೇಶಕರ ಕಛೇರಿಯಲ್ಲಿ ಬಾಕಿ ಇರುವ ಪ್ಯಾರಗಳ ಸಂಖ್ಯೆ | ಉಪನಿರ್ದೇಶಕರವ್ಯಾಪಿಗೆ ಒಳಪಡುವ ಕಾಲೇಜುಗಳಲ್ಲಿ ಬಾಕಿ ಇರುವ ಪ್ಯಾರಗಳ ವಿವರ | ಒಟ್ಟು |
|---|---|---|---|---|
| 1 | ಬೆಂಗಳೂರು ಉತ್ತರ | **334 ರಿಂದ 336, 339ರಿಂದ404** | 82,110,366ರಿಂದ368, 392 | 15 |
| 2 | ಬೆಳಗಾಂ | **163 ರಿಂದ 166** | | 4 |
| 3 | ಬಾಗಲಕೋಟೆ | **83 ರಿಂದ 103** | 65,66,67,77,80,410 | 27 |
| 4 | ಬೀದರ್ | **119 ರಿಂದ 121, 216 ರಿಂದ 227** | 45,75,76 | 18 |
| 5 | ಹಾವೇರಿ | **131 ರಿಂದ 136** | 78 | 7 |
| 6 | ಗುಲ್ಬರ್ಗಾ | **234 ರಿಂದ 248** | 46 ರಿಂದ 49,52,60,61 157 ರಿಂದ 159 | 25 |
| 7 | ಚಿಕ್ಕಬಳ್ಳಾಪುರ | **293 ರಿಂದ 304** | | 12 |
| 8 | ರಾಮನಗರ | **143 ರಿಂದ 156** | 414ರಿಂದ 417 | 18 |

ಲೆಕ್ಕಾಧಿಕಾರಿಗಳು,
ಪದವಿ ಪೂರ್ವ ಶಿಕ್ಷಣ ಇಲಾಖೆ.

Accounts Section

# Annexure

| Sl. No. | Name of the College with code | No. Of Sections Sanctioned - (Combination wise) | No. Of Posts Sanctioned (subject wise) | No. Of posts working at present | Salary drawn | Govt. Order, Dept. Order & Accts. Sectn. Order Attach the copies | Remark |
|---|---|---|---|---|---|---|---|
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |